## ಮಹಿಳಾ ಸಬಲೀಕರಣಕ್ಕೆ ಮಾತಾಅಮೃತಾಮಯಿ ಸಂದೇಶ

# ಅಮೃತಾ ವಿವಿಗೆ ಯುನೆಸ್ಕೋ ಗೌರವ

ಬೆಂಗಳೂರು: ಯುನೆಸ್ಕೋದ ಪ್ರತಿಷ್ಠಿತ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣದ ಅಧ್ಯಕ್ಷ ಸ್ಥಾನಕ್ಕೆ ಅಮೃತಾ ವಿಶ್ವವಿದ್ಯಾಲಯವನ್ನು ವಿಶ್ವಸಂಸ್ಥೆ ಆಯ್ಕೆ ಮಾಡಿದೆ. ಪ್ಯಾರೀಸ್‌ನಲ್ಲಿ 8 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದ ಸಮಾವೇಶದಲ್ಲಿ ಅಮೃತಾ ವಿಶ್ವವಿದ್ಯಾಲಯದ ಕುಲಪತಿ ಮಾತಾ ಅಮೃತಾನಂದಮಯಿ ದೇವಿ ಮಾತನಾಡಿ ಮಹಿಳಾ ಸಬಲೀಕರಣದ ಸಂದೇಶವನ್ನು ನೀಡಿದರು.

ಅಮೃತಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಪಿ.ವೆಂಕಟ್ ರಂಗನ್ ಅವರು ಮಾತನಾಡಿ, ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ವಿಭಾಗದ ಅಧ್ಯಕ್ಷತೆ ವಹಿಸುತ್ತಿರುವ ಭಾರತದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆ ನಮ್ಮದಾಗಿದೆ.

ಬಹುತೇಕ ಮುಂದುವರೆದ ರಾಷ್ಟ್ರಗಳಲ್ಲಿ ಕೆಲವು ಪ್ರತಿಷ್ಠಿತ ಸಂಸ್ಥೆಗಳಿದ್ದಾಗಿಯೂ ನಮಗೆ ಈ ಅವಕಾಶ ಲಭಿಸಿದೆ. ಅಮ್ಮಾ ಅವರು ಕೈಗೊಂಡಿರುವ ಸಾಮಾಜಿಕ ಮತ್ತು ಮಾನವೀಯ ಕಾರ್ಯಗಳಿಗೆ ನೀಡುತ್ತಿರುವ ಹೆಚ್ಚು ಪ್ರಾತಿನಿಧ್ಯ ಈ ಪದವಿಯಲ್ಲಿ ಪ್ರತಿಫಲವಾದಂತಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ನಾವು ಭಾರತದಲ್ಲಿ ಮಹಿಳೆ ಮತ್ತು ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಪತ್ತೆ ಮಾಡಿ ಅವುಗಳಿಗೆ ಪರಿಹಾರ ಕಂಡುಹಿಡಿಯಲಿದ್ದೇವೆ ಎಂದರು.

ಯುನೆಸ್ಕೋದ ಉನ್ನತ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಪೀಟರ್ ವೆಲ್ಸ್ ಮಾತನಾಡಿ, ವಿಶ್ವದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಿಂತ ಅತ್ಯದ್ಭುತವಾದ ಅಭಿವೃದ್ಧಿ, ಸ್ತ್ರೀಸ್ವಾವಲಂಬನೆ

> **ಮಾನವೀಯ ಕಾರ್ಯಗಳಿಗೆ ಪ್ರಾತಿನಿಧ್ಯ**
>
> ಅಮ್ಮಾ ಅವರು ಕೈಗೊಂಡಿರುವ ಸಾಮಾಜಿಕ ಮತ್ತು ಮಾನವೀಯ ಕಾರ್ಯಗಳಿಗೆ ನೀಡುತ್ತಿರುವ ಹೆಚ್ಚು ಪ್ರಾತಿನಿಧ್ಯ ಈ ಪದವಿಯಲ್ಲಿ ಪ್ರತಿಫಲವಾದಂತಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ನಾವು ಭಾರತದಲ್ಲಿ ಮಹಿಳೆ ಮತ್ತು ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಪತ್ತೆ ಮಾಡಿ ಅವುಗಳಿಗೆ ಪರಿಹಾರ ಕಂಡುಹಿಡಿಯಲಿದ್ದೇವೆ
>
> ■ ಉಪಕುಲಪತಿ ಡಾ.ಪಿ.ವೆಂಕಟ್ ರಂಗನ್

ಮತ್ತು ಶಾಂತಿ ಬೇರೊಂದಿಲ್ಲ. ಈ ನಿಟ್ಟಿನಲ್ಲಿ ಅಮೃತಾ ವಿಶ್ವವಿದ್ಯಾಲಯದಂತಹ ಸಂಸ್ಥೆಗಳು ದಿಟ್ಟ ಹೆಜ್ಜೆ ಇಟ್ಟು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವುದು ಸೇರಿದಂತೆ ಈ ಸಂಬಂಧ ಹಲವಾರು ಕಾರ್ಯತಂತ್ರ ರೂಪಿಸುವುದರ ಜತೆಗೆ ಮಾರ್ಗದರ್ಶನ ನೀಡುತ್ತಿವೆ ಎಂದರು.

ಯುನೆಸ್ಕೋದಲ್ಲಿ ಭಾರತೀಯ ಶಾಶ್ವತ ಪ್ರತಿನಿಧಿ ಮತ್ತು ರಾಯಭಾರಿಯಾಗಿರುವ ರುಚಿರ ಕಂಬೋಜ್, ಯುನೆಸ್ಕೋದ ಉನ್ನತ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಪೀಟರ್ ವೆಲ್ಸ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅಮೃತಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಪಿ.ವೆಂಕಟ್ ರಂಗನ್ ಅವರು ವಿ.ವಿಯ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಿ ಒಪ್ಪಂದ ಪತ್ರವನ್ನು ಡಾ.ವೆಲ್ಸ್ ಅವರಿಗೆ ಹಸ್ತಾಂತರಿಸಿದರು.

**ಯುನೆಸ್ಕೋ ಗೌರವ. . .**



ಪ್ಯಾರೀಸ್‌ನಲ್ಲಿ ನಡೆದ ಸಮಾವೇಶದಲ್ಲಿ ಅಮೃತಾ ವಿಶ್ವವಿದ್ಯಾಲಯದ ಕುಲಪತಿ ಮಾತಾ ಅಮೃತಾನಂದಮಯಿ ದೇವಿ ಅವರಿಗೆ ಯುನೆಸ್ಕೋ ಗೌರವ ಪ್ರಶಸ್ತಿ ಪ್ರದಾನ ಮಾಡಿತು.